**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 995/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 1**

**ದಿನಾಂಕಃ** 01.07.2026 **ಸಿಡಬ್ಲ್ಯೂ 1**

| | |
|---|---|
| ಹೆಸರು | ಮಹೇಶ್ವರಪ್ಪ |
| ತಂದೆಯ ಹೆಸರು | ಮುರುಗೇಂದ್ರಪ್ಪ |
| ವಯಸ್ಸು | 51 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ದೀಟೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ24.12.2023 ರಂದು 1 ತಿಂಗಳ ಹಿಂದೆ ಹಾಕಿದ ಮಣ್ಣನ್ನು ತೆಗೆದು ಹಾಕದೇ ಇದ್ದುದರಿಂದ ಆರೋಪಿತರಿಗೆ ಹೇಳಿದಾಗ ಪ್ರಾಬ್ಲಂ ಆಗುತ್ತೆ ಮಣ್ಣು ತೆಗೆದು ಹಾಕಿ ಎಂದು ಹೇಳಿರುತ್ತೇನೆ. ಆಗ ಆರೋಪಿತರು ನಮ್ಮ ಜೊತೆ ಜಗಳ ತೆಗೆದು ಬೀರಪ್ಪ ಮತ್ತು ಕೊಟ್ರೇಶ ನನಗೆ ಹೊಡೆದಿರುತ್ತಾರೆ. ಬಿಡಿಸಲು ಬಂದ ನನ್ನ ಮಗ ಮತ್ತು ಚಾಲಕ ಒಬಳಪ್ಪ ಬಿಡಿಸಲು ಬಂದಾಗ ಆರೋಪಿತರೆಲ್ಲರೂ ಕಲ್ಲಿನಿಂದ ಹೊಡೆದಿರುತ್ತಾರೆ. ನಂತರ ನಾವು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇವೆ. ನಂತರ ಪೋಲೀಸರು ಸರ್ಕಾರಿ ಆಸ್ಪತ್ರೆಗೆ ಬಂದು ಮಾಹಿತಿಯನ್ನು ತೆಗೆದುಕೊಂಡಿರುತ್ತಾರೆ. ನಾನು ಸಹಿ ಮಾಡು ಎಂದು ಹೇಳಿದ್ದಕ್ಕೆ ಮಾಡಿರುತ್ತೇನೆ. ಸಾಕ್ಷಿಯು ದದೂರನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ಇಟ್ಟಿಗೆಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ 1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ನಮ್ಮ ಗ್ರಾಮದಲ್ಲಿ ಸ.ನಂ. 67/3 ರಲ್ಲಿ 39 ಗುಂಟೆ ಜಮೀನು ಇತ್ತು ಎಂದರೆ ಸರಿ. ನಮ್ಮ ಜಮೀನಿನಲ್ಲಿ ಭತ್ತದ ಬೆಳೆಯನ್ನು ಬೆಳೆದಿರುತ್ತೇವೆ. ನಮ್ಮ ಜಮೀನಿನ ಪಕ್ಕದಲ್ಲಿ ಆರೋಪಿತರ ಜಮೀನು ಇದ್ದು ಅರದಲ್ಲಿ ಇಟ್ಟಿಗೆ ಭಟ್ಟಿ ಇಟ್ಟುಕೊಂಡು ತ್ಯಾಜ್ಯ ಮಣ್ಣನ್ನು ನಮ್ಮ ಜಮೀನಿನಲ್ಲಿರುವ ಕಾಲುವೆಗೆ ಹಾಕಿರುತ್ತಾರೆ ಎಂದರೆ ಸರಿ. ನಾನು ಮಣ್ಣನ್ನು ತೆಗೆಯುವಂತೆ ಅವರಿಗೆ ಹೇಳಿರುತ್ತೇನೆ ಎಂದರೆ ಸರಿ. ದಿಃ24.12.2023 ರಂದು ಬೆಳಗ್ಗೆ 7 ಗಂಟೆಗೆ ನಾನು ಜೆಸಿಬಿಯಿಂದ ಕಾಲುವೆಯಲ್ಲಿದ್ದ ಮಣ್ಣನ್ನು ತೆಗೆಸಿ 1 ನೇ ಆರೋಪಿತನ ಜಮೀನಿಗೆ ಹಾಕಿರುತ್ತೇನೆ ಎಂದರೆ ಸರಿ. ನಂತರ ಕೊಟ್ರೇಶ ಮಧ್ಯಾಹ್ನ ನನ್ನ ಮಗ ಮುರುಳಿಗೆ ಪೋನ್ ಮಾಡಿ ನಮ್ಮ ಜಮೀನಿಗೆ ಮಣ್ಣನ್ನು ಹಾಕಿರುತ್ತಿರಾ ಎಂದು ಬೈದಿರುತ್ತಾನೆ, ನಂತರ

ನಾನು ಸಂಜೆ 6 ಗಂಟೆಗೆ ಹೊಲಕ್ಕೆ ಹೋದಾಗ ಅಲ್ಲಿ 1 ನೇ ಆರೋಪಿಯು ನಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಬೋಳಿಮಗನೇ ಸೂಳೆಮಗನೇ ಎಂದು ಅವ್ಯಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದರೆ ಸರಿ. ಏಕಾಏಕಿ ಬಂದು ಕಾಪಳಕ್ಕೆ ಹೊಡೆದಿರುತ್ತಾನೆ ಎಂದರೆ ಸರಿ. ಉಳಿದ ಆರೋಪಿತರು ಬಂದು ತಲೆಗೆ ಕಣ್ಣಿಗೆ ಇಟ್ಟಿಗೆಯಿಂದ ಹೊಡೆದಿರುತ್ತಾರೆ ಎಂದರೆ ಸರಿ. ಆ ಕಾಲಕ್ಕೆ ಬಿಡಿಸಲು ಬಂದ ಬಸವರಾಜನಿಗೆ ಜೀವ ಸಹಿತ ಬಿಡುವುದಿಲ್ಲ ಎಂದು ತಲೆಗೆ ಕೊಟ್ರೇಶ ಹೊಡೆದಿರುತ್ತಾರೆ ಎಂದರೆ ಸರಿ. ನಮ್ಮನ್ನು ಕಾಲುವೆಗೆ ತಳ್ಳಿ ಕಲ್ಲನ್ನು ಎತ್ತಿ ಹಾಕಲು ಬಂದಾಗ ಅಲ್ಲಿಯೇ ಇದ್ದ ಬಸವರಾಜಪ್ಪ, ಜಯಪ್ಪ ಮತ್ತು ನನ್ನ ಮಗ ಮುರಳಿ ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ನಂತರ ನಮ್ಮನ್ನು ಹರಿಹರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ ಎಂದರೆ ಸರಿ. ದಿಃ25.12.2023 ರಂದು ನನ್ನ ಹೇಳಿಕೆ ಪಡೆದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಎಂ ಎನ್ ವಕೀಲರಿಂದಃ

ನಮ್ಮ ಮೇಲೆ ಆರೋಪಿತರು ಸಿಸಿ ನಂ.864/2024 ದಾಖಲಿಸಿರುತ್ತಾರೆ ಎಂದರೆ ಸರಿ.ಕೊಟ್ರಪ್ಪ ಏನು ದೂರು ಸಲ್ಲಿಸಿರುತ್ತಾನೆಂದು ನನಗೆ ಗೊತ್ತಿರುವುದಿಲ್ಲ. ನಾನು ಮಣ್ಣನ್ನು ತೆಗೆದುಕೊಳ್ಳುವಂತೆ ಆರೋಪಿತರ ವಿರುದ್ಧ ದೂರನ್ನು ನೀಡಿರುವುದಿಲ್ಲ. ನಾನು ಜೆಸಿಬಿಯಿಂದ ಆರೋಪಿತರ ಪಶ್ಚಿಮ ದಿಕ್ಕಿನಲ್ಲಿರುವ ಬದುವಿನ ಮಣ್ಣನ್ನು ಕಳಿಸುತ್ತಿದ್ದೆನು ಎಂದರೆ ಸರಿ. ನಾನು ಜೆಸಿಬಿಯಿಂದ ಸುಮಾರು 20 ಅಡಿ ದೂರ 3 ರಿಂದ 4 ಟ್ರಾಕ್ಟರ್ ಮಣ್ಣು ಹಾಕಿಸಿದ್ದೆನು. ನಾನು ಮಣ್ಣು ಹಾಕಿರುವ ಜಾಗವನ್ನು ಪೋಲೀಸರಿಗೆ ತೋರಿಸಿರುವುದಿಲ್ಲ. ನಾನು ವೈದ್ಯರಿಗೆ ಆರೋಪಿತರು ಹೊಟ್ಟೆಗೆ ಒದ್ದಿರುತ್ತಾರೆಂದು ಬಿಟ್ಟು ಬೇರೆ ವಿಷಯ ಹೇಳಿರುವುದಿಲ್ಲ. ಬಸವರಾಜನಿಗೆ ತಲೆಗೆ ರಕ್ತಗಾಯವಾಗಿರುತ್ತದೆ. ಬಸವರಾಜನ ಬಟ್ಟೆಗೆ ರಕ್ತ ಬಿದ್ದು ಜಮೀನಿನಲ್ಲಿ ರಕ್ತದ ಕಲೆಗಳು ಇದ್ದವು. ಇಟ್ಟಿಗೆಗೆ ರಕ್ತ ಹತ್ತಿದ ಬಗ್ಗೆ ನಾನು ನೋಡಿರುವುದಿಲ್ಲ. ಅಲ್ಲಿ ಜಾಗದಲ್ಲಿ ಸುಮಾರು 2-3 ಟ್ರಾಕ್ಟರ್ ನಷ್ಟು ಇಟ್ಟಿಗೆಗಳು ಇದ್ದವು. ನನ್ನನ್ನು ಚರಂಡಿಗೆ ದಬ್ಬಿದಾಗ ಅಲ್ಲಿ ಕೆಸರಿತ್ತು. ನನ್ನ ಬಟ್ಟೆಗೆ ಕೆಸರು ಮೆತ್ತಿಕೊಂಡಿರುತ್ತದೆ. ಕಲ್ಲು ಸುಮಾರು 25 ಕೆಜಿ ಇತ್ತು. ಆ ಕಲ್ಲು ನ್ಯಾಯಾಲಯದಲ್ಲಿಲ್ಲ ಎಂದರೆ ಸರಿ. ಆರೋಪಿತರು ನನಗೆ ಹೊಡೆ ಬಡೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿ, ಕಲ್ಲಿಂದ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ನನಗೆ ಕಪಾಳಕ್ಕೆ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿತರ ಜಮೀನನ್ನು ಅತಿಕ್ರಮ ಪ್ರವೇಶ ಮಾಡಿ ಒತ್ತುವರಿ ಮಾಡುವ ಪ್ರಯತ್ನ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವೈದ್ಯರಿಂದ ಸುಳ್ಳು ಗಾಯದ ಪ್ರಮಾಣ ಪತ್ರ ಸೃಷ್ಟಿ ಮಾಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನೀಡಿರುವ ದೂರಿನ ಮಾಹಿತಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನಾನು ಇಟ್ಟಿಗೆಯಿಂದ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ